ಉದ್ಯುಕ್ತರಾಗುವುದಿಲ್ಲ ಎಂಬ ನಂಬಿಕೆಯ ಅರಿವಿತ್ತು. ಈ ಪಶ್ಚಿಮ ದೇಶದಲ್ಲಿ ವಾಸಿಸುತ್ತಾ, ಹೀಗೆ ದೇವರು ಪ್ರಾಣಿಗಳ ರೂಪಾಕಾರ ಹೊಂದುವುದನ್ನು ಅರ್ಥ ಮಾಡಿ ಕೊಡುವುದು ಕಷ್ಟವಿತ್ತು. ಆದರೂ ಆ ನಿಟ್ಟಿನಲ್ಲಿ ಅವನು ಹೆಜ್ಜೆಯಿಡಬೇಕಿತ್ತು.

ಸುನಿಲ್ ಗಾಢ ಯೋಚನೆಯಲ್ಲಿ ಮುಳುಗಿದ. ದೀಪಾಳ ಗಮನಕ್ಕೆ ಈ ವಿಷಯವನ್ನು ತರಬೇಕೇ, ಇಲ್ಲ ತಾನೇ ಮುಂದಾಗಬೇಕೇ? ಮಾಡಬೇಕಾದುದೇನು? ಬಚ್ಚಲಿನಿಂದ ಹೊರಬಂದು, ಹೊರಗಣ ಡಾನ್ಸ್ ಫ್ಲೋರ್‌ನಲ್ಲಿ ಅತ್ತಿತ್ತ ಅಳಾಯಿಸಿದ. ಟ್ರಾಕ್ ಪ್ಯಾಂಟ್ ಧರಿಸಿ, ಕೆದರಿದ ಕೂದಲು, ಇಳಿಬಿದ್ದ ಭುಜಗಳ ಸುನಿಲ್, ನೋಡುವಂತಿದ್ದ!

"ಸುನಿಲ್... ಎಲ್ಲಿದ್ದೀ?" ದೀಪಾಳ ದನಿ ಆ ಕೆಳಮಹಡಿಯ ಗೋಡೆಯನ್ನು ಭೇದಿಸಿ ತೂರಿ ಬಂತು. ಸುನಿಲ್, ಆ ಕರೆಗೆ ಸ್ಪಂದಿಸಿ ಮೇಲಕ್ಕೋಡಿದ. ನಡೆದ ಸಂಗತಿ ಅವನೆದೆಯ ಮೇಲೆ ಭಾರವಾಗಿ ತೂಗುತ್ತಿತ್ತು. ದೀಪಾಗೆ ಹೇಳುವುದೇ ಬೇಡವೇ ಎಂದು ಇನ್ನೂ ಜಿಜ್ಞಾಸೆಯಲ್ಲಿದ್ದನವ. ಮೂರ್ತಿ ಕರಗದಿದ್ದುದಕ್ಕೆ ಅವನೇನೂ ಕಾರಣನಾಗಿರಲಿಲ್ಲ. ಆದರೆ ದೀಪಾಳ ಸುವ್ಯವಸ್ಥೆಯ ಜಗತ್ತಿನಲ್ಲಿ ತಾನೊಂದು ದುರ್ಬಲ ಕೊಂಡಿಯಾಗಿ ಕಾಣಬಹುದೆಂಬ ಯೋಚನೆಯಿಂದ ಅವನ ಹೃದಯ ಕುಸಿಯಿತು. ಕುಸಿದ ಹೃದಯದಿಂದಲೇ ನಿದ್ರಿಸ ಹೋದ ಸುನಿಲ್, ಆಡುಮಾತಿನಂತೆ, ಎಚ್ಚರಾಗುವಾಗ ಪರಿಹಾರ ಕಂಡೀತೆಂದು ಆಶಿಸಿದ.

ಇಷ್ಟಕ್ಕೂ ಅದು ಕೇವಲ ಒಂದು ಮೂರ್ತಿ, ತಾನೇ? ಆ ಮೂರ್ತಿಯನ್ನು ಮನೆಗೆ ತಂದು, ಪ್ರತಿಷ್ಠಾಪಿಸಿ, ದೇವನನ್ನು ಆವಾಹಿಸಿ ಪೂಜಿಸುವಲ್ಲಿ, ಮತ್ತೆ ಆರತಿಯೆತ್ತಿ ವಿದಾಯ ಕೋರುವಲ್ಲಿ ಸಾಕಷ್ಟು ಶ್ರಮ ವಹಿಸಿದ್ದ, ಸುನಿಲ್. ಈಗ ಉಳಿದಿರುವುದು ಆ ಗಜಮುಖನ ಮಣ್ಣಿನ ಮೂರ್ತರೂಪವಷ್ಟೇ, ಅಲ್ಲವೇ? ದೇವನೇನೂ ಅಲ್ಲಿಲ್ಲ. ಅನುಪಯುಕ್ತವಾದುದನ್ನು ತೊರೆದು ಬಿಡುವಂತೆ ಅದನ್ನೇಕೆ ಹಾಗೇ ಬಿಸುಡಬಾರದು? ಈ ಹಾಡು, ಕುಣಿತ, ರಾಗ ತಾಳದ ಜೊತೆ ನೀರಲ್ಲಿ ವಿಸರ್ಜನೆಯೆಲ್ಲ ಏಕೆ? ಈ ಯೋಚನೆಯೊಡನೆ ಸುನಿಲ್ ಹಾಸಿಗೆಯಲ್ಲಿ ನೆಟ್ಟನೆದ್ದು ಕುಳಿತ. ಬೆವರುತ್ತಿದ್ದ ಸುನಿಲ್‌ನ ಹೃದಯದ ಬಡಿತ ಜೋರಾಗಿತ್ತು. ಅಯ್ಯೋ! ಅದು ಅವನ ವಿಚಾರವಾಗಿರಲಿಲ್ಲ. ಇದೆಂಥಾ ದುರಂತ! ಇಂಥಾ ಪಾಪಿ ಯೋಚನೆ! ಇಂತಹ ವಿಚಾರಕ್ಕಾಗಿ ಅವನ ಹೆತ್ತವರು ಅವನನ್ನು ತೊರೆದೇ ಬಿಟ್ಟು, ತಮ್ಮ ಉತ್ತರಾಧಿಕಾರದಿಂದ ಕಿತ್ತೆಸೆಯುವುದು ಖಂಡಿತ! ತನ್ನ ಮನದ ಈ ದುರುಳ ಯೋಚನೆಯನ್ನು ಅವನು ಯಾರೊಡನೆಯೂ ಹೇಳುವಂತಿರಲಿಲ್ಲ. ಹೌದು, ಆಡುಮಾತಿನಂತೆ, ನಿದ್ರಿಸಿ ಎದ್ದಾಗ ಮೂಡಿದ ಯೋಚನೆಯದು!

ಹಿತಕರ ಬೇಸಗೆಯ ಬೆಳಗಾಗಿತ್ತದು. ಇನ್ನೂ ಬೆಳಗಿನ ನಾಲ್ಕು ಗಂಟೆಯ ಸಮಯ. ದೀರ್ಘ ಹಗಲುಗಳ ಸೂಚನೆಯಾಗಿ ಆಗಸ ಕಿತ್ತಳೆ ತಿರುಗಿತ್ತು. ದೀಪಾಳಿಗೆ ಎಚ್ಚರವಾಗದಂತೆ ಮೆಲ್ಲನೆ ಎದ್ದು ನಡೆದನವ. ಟ್ರಾಕ್ ಪ್ಯಾಂಟ್ ಮತ್ತು ಟೀ ಶರ್ಟ್ ಧರಿಸಿ, ನೆಲದ ಹಲಗೆಗಳು ಕಿರುಲದಂತೆ ತುದಿ ಬೆರಳುಗಳಲ್ಲಿ ನಡೆಯುತ್ತಾ ಅವನು ಹೊರಗೆ ಬಂದ. ಹಕ್ಕಿಗಳ ಚಿಲಿಪಿಲಿ ಕೇಳಿಸುತ್ತಿತ್ತು. ವೃತ್ತಪತ್ರ ಹಂಚುವ ಕಾರುಗಳು ಸದ್ದಿಲ್ಲದೆ ಸುಳಿದೋಡುತ್ತಿದ್ದುವು. ಸುತ್ತ ನಿರ್ಮಾಣ ಹಂತದಲ್ಲಿದ್ದ ಮನೆಗಳ ಕೆಲಸಗಾರರು ಬಂದಿಳಿಯುತ್ತಿದ್ದರು. ಅಡಿಗೆಮನೆ ಡ್ರಾವರ್‌ನಲ್ಲಿ ಪೇರಿಸಿಟ್ಟಿದ್ದ ಪ್ಲಾಸ್ಟಿಕ್ ಚೀಲಗಳಿಂದ ಸಾಕಷ್ಟು ಗಟ್ಟಿಯಾದ್ದೊಂದನ್ನು ಎತ್ತಿಕೊಂಡ. ಕೆಳಗಿನ ಬಚ್ಚಲು ಮನೆಗೋಡಿ, ಬಾಲ್ದಿಯಲ್ಲಿದ್ದ ದೇವನ ಬಳಿಗೆ ಬಂದ. ಇದ್ದಂತೇ ಪಕ್ಕಕ್ಕೊರಗಿ, ಮೇಲೆ ತನ್ನತ್ತ ದಿಟ್ಟಿಸುತ್ತಾ, ಶಾಂತಿಯಿಂದಿದ್ದ, ಮೂರ್ತಿ! ಬಾಲ್ದಿಯನ್ನು ಬಗ್ಗಿಸಿ ನೀರನ್ನು ಹರಿಬಿಟ್ಟ, ಸುನಿಲ್. ಒದ್ದೆಯಾಗಿದ್ದರೂ ಮೂರ್ತಿ ದೃಢವಾಗೇ ಇತ್ತು. ಶಾಶ್ವತವೆಂಬಂತೆ! ಮೇಡ್ ಇನ್